| | |
|---|---|
| **Date:** 14.03.2023 | **Publication:** Eesanje |
| **Page no:** 3 | **Edition:** Bangalore |
| **Headline : Important Time Frames in Health Insurance** | |

ಈ ಸಂಜೆ

# ವಿಮೆ ಬಗ್ಗೆ ತಿಳಿವಳಿಕೆ ಅಗತ್ಯ

**ಬೆಂಗಳೂರು, ಮಾ.13:** 'ಆರೋಗ್ಯವೇ ಭಾಗ್ಯ' ಎಂಬುದು ನಮ್ಮೆಲ್ಲರಿಗೂ ಚಿರಪರಿಚಿತ ನಾಣ್ಣುಡಿ. ಕಳೆದ ಎರಡು ವರ್ಷಗಳು ಈ ಪ್ರಾಚೀನ ನಾಣ್ಣುಡಿಯ ಮಹತ್ವವನ್ನು ನಮ್ಮೆಲ್ಲರಿಗೆ ಚೆನ್ನಾಗಿಯೇ ಕಲಿಸಿವೆ. ಇಂದಿನ ದಿನಗಳಲ್ಲಿ, ಆರೋಗ್ಯ ಸಂಬಂಧಿತ ವೆಚ್ಚಗಳು ಉಂಟಾದಲ್ಲಿ ಅವನ್ನು ನಿಭಾಯಿಸುವ ಒಂದು ಆರೋಗ್ಯ ವಿಮಾ ಪಾಲಿಸಿ ಅಂದರೆ ಹೆಲ್ತ್ ಇನ್ಶೂರೆನ್ಸ್ ಪಾಲಿಸಿಯು ಅತ್ಯವಶ್ಯಕವಾಗಿದೆ. ಆದರೆ, ಒಂದು ಹೆಲ್ತ್ ಕವರ್ ಖರೀದಿಸುವ ಮುಂಚೆ, ಆರೋಗ್ಯ ವಿಮೆಗೆ ಸಂಬಂಧಿತ ಕೆಲವು ಪ್ರಮುಖ ಶಬ್ದಗಳನ್ನು ತಿಳಿದುಕೊಳ್ಳುವುದು ಅವಶ್ಯಕವಾಗಿದೆ ಎಂದು ಬಜಾಜ್ ಅಲಿಯಾನ್ಸ್ ಜೆನರಲ್ ಇನ್ಶೂರೆನ್ಸ್‌ನ ಭಾಸ್ಕರ್ ನೇರುರ್ಕರ್ ಹೇಳಿದ್ದಾರೆ.

ಫ್ರೀ ಲುಕ್ ಅವಧಿ, ಗ್ರೇಸ್ ಅವಧಿ, ಕೋ-ಪೇ ಷರತ್ತು, ಆರೋಗ್ಯ ವಿಮೆಯಲ್ಲಿ ಕ್ಯುಮ್ಯುಲೇಟಿವ್ ಬೋನಸ್ ಬಗ್ಗೆ ತಿಳಿದಿರಬೇಕು ಇದರಿಂದಾಗುವ ಪ್ರಯೋಜನದ ಬಗ್ಗೆ ತಿಳುವಳಿಕೆ ಅಗತ್ಯವಾಗಿದೆ ಎಂದು ತಿಳಿಸಿದ್ದಾರೆ.